ಮೂಲ ದಾವಾ ನಂ.53-2014
ಪಿ ಡಬ್ಲು: 1

ದಿನಾಂಕಃ 28-07-2016 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.
ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ -

1ನೇ ಪ್ರತಿವಾದಿ ನನ್ನ ತಂದೆ ಎಂದರೆ ಸರಿ. 7ನೇ ಪ್ರತಿವಾದಿ 5ನೇ ಪ್ರತಿವಾದಿಯ ಗಂಡ ಎಂದರೆ ಸರಿ. ನನ್ನ ತಂದೆಗೆ ಗಂಡು ಸಂತಾನ ಇಲ್ಲ ಎಂದರೆ ಸರಿ. 5 ಮತ್ತು 7ನೇ ಪ್ರತಿವಾದಿಯರು ಮದುವೆಯಾದ ನಂತರ 1ನೇ ಪ್ರತಿವಾದಿಯರೊಂದಿಗೆ ವಾಸವಾಗಿದ್ದಾರೆಂದರೆ ಸರಿಯಲ್ಲ. 5 ಮತ್ತು 7ನೇ ಪ್ರತಿವಾದಿಯರು ಹೇರವಟ್ಟಾದಲ್ಲಿ ಭಾಡಿಗೆ ಮನೆಯಲ್ಲಿ ವಾಸವಾಗಿದ್ದರು. 5 ಮತ್ತು 7ನೇ ಪ್ರತಿವಾದಿಯರಿಗೆ ಭಾಡಿಗೆ ಮನೆ ಸಿಕ್ಕಿರುವುದಿಲ್ಲವೆಂದು 1 ಮತ್ತು 2ನೇ ಪ್ರತಿವಾದಿಯರ ಜೊತೆ ವಾಸವಾಗಿದ್ದಾರೆಂದರೆ ಸರಿ. 8ನೇ ಪ್ರತಿವಾದಿ ನಮ್ಮ ಕುಟುಂಬದವರಲ್ಲ. ನನ್ನ ಮದುವೆಯಾದ ನಂತರ ನಾನು ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೇನೆಂದರೆ ಸರಿ. 3 ಮತ್ತು 6ನೇ ಪ್ರತಿವಾದಿಯರು ಮದುವೆಯ ನಂತರ ಅವರವರ ಗಂಡನ ಮನೆಯಲ್ಲಿ ವಾಸವಾಗಿದ್ದಾರೆಂದರೆ ಸರಿ. 4ನೇ ಪ್ರತಿವಾದಿಯ ಮದುವೆ ಯಾವಾಗ ಆಗಿದೆ ಎಂದು ನನಗೆ ಗೊತ್ತಿಲ್ಲ. ನಾನು 4ನೇ ಪ್ರತಿವಾದಿಯ ಲಗ್ನಕ್ಕೆ ಹೋಗಿದ್ದೆನು. ಮದುವೆಯ ನಂತರ ಆಕೆ ಆತನ ಗಂಡನ ಮನೆಯಲ್ಲಿ ವಾಸವಾಗಿದ್ದಾಳೆಂದರೆ ಸರಿ. 1 ಮತ್ತು 2ನೇ ಪ್ರತಿವಾದಿಯರಿಗೆ ಎಷ್ಟು ವರ್ಷ ವಯಸ್ಸಾಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. 1 ಮತ್ತು 2ನೇ ಪ್ರತಿವಾದಿಯರು ವಯಸ್ಸಾಗಿರುವುದರಿಂದ ಅವರಿಗೆ ಸಾಗುವಳಿ ಮಾಡಲು ಬರುವುದಿಲ್ಲವೆಂದರೆ ಸರಿ. ನಮ್ಮ ತಂದೆ-ತಾಯಿಗೆ ಎಲ್ಲ ಹೆಣ್ಣುಮಕ್ಕಳು ಮದುವೆ ಆಗಿ ಹೋಗಿದ್ದರಿಂದ 5ನೇ ಪ್ರತಿವಾದಿ ನಮ್ಮ ತಂದೆ-ತಾಯಿಗೆ ಸಹಾಯ ಮಾಡುವ ಉದ್ದೇಶದಿಂದ ಅವರ ಸಂಗಡ ವಾಸವಾಗಿದ್ದಾರೆಂದರೆ ಸರಿಯಲ್ಲ. 5ನೇ ಪ್ರತಿವಾದಿಯಳಿಗೆ ಇಬ್ಬರು ಮಕ್ಕಳಿದ್ದು ಒಬ್ಬನಿಗೆ 22 ವರ್ಷ ಇನ್ನೊಬ್ಬ ಸಣ್ಣವನಿರುತ್ತಾರೆ. 5ನೇ ಪ್ರತಿವಾದಿ ಕಳೆದ ವರ್ಷ ಮೃತಪಟ್ಟಿರುತ್ತಾಳೆ. 5ನೇ ಪ್ರತಿವಾದಿ ಮೃತಪಟ್ಟಿದ್ದಾಳೆಂದು ನನ್ನ ವಕೀಲರಿಗೆ ತಿಳಿಸಿರುತ್ತೇನೆ.

(ಮುಂದುವರೆದ ಪಾಟೀ ಸವಾಲಿಗೆ ಸಮಯಕೋರಿದ್ದರಿಂದ ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಸಿವಿಲ್ ಜಡ್ಜ್ ಕುಮಟಾ.